ಅನುಕೂಲವಾಗುತ್ತದೆ. ಇಲ್ಲವೆಂದರೆ ಹೆಸರಿಗೆ ಅವರು ಸಮುದಾಯ ಮಾರ್ಗದರ್ಶಿಗಳೆಂದು ಹೇಳಿ, 50 ರೂಪಾಯಿ ಏನು ತಿಂಗಳಿಗೆ ಕೊಡುತ್ತಿದ್ದಾರೆ, ಇದು ಯಾವ ಮಾನವೀಯತೆ? ಅಧ್ಯಕ್ಷರೇ, ನೀವೇ ಹೇಳಿ. ಹಾಗಾಗಿ ರಾಜ್ಯಸರ್ಕಾರ ಯಾವುದಾದರೂ ಒಂದು ರೀತಿಯಲ್ಲಿ ಅವರಿಗೆ ಗೌರವಧನ ಹೆಚ್ಚಿಸುವುದಕ್ಕೆ ಬೇಕಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಬೇಕು. ಇವರದ್ದೇ ನಿಧಿ ಇದೆ. ಇವರ ನಿಧಿಯಿಂದ ಅವರಿಗೆ ಕೊಡಲಿ. ಅದನ್ನು ಕೊಡುವುದಕ್ಕೆ ಇರುವ ತೊಂದರೆ ಏನು?

ಡಾ॥ ಎ.ಬಿ. ಮಾಲಕರೆಡ್ಡಿ:- ಆರೋಗ್ಯ ಮಾರ್ಗದರ್ಶಿಗಳಿಗೆ ಏನು ಕೆಲಸ ಇತ್ತು, ಆ ಕೆಲಸವನ್ನು ಉಳಿದ ಸಿಬ್ಬಂದಿಯವರು ಮಾಡುತ್ತಿದ್ದಾರೆ. ಇವರಿಗೆ ಈಗ ವಿಶೇಷವಾದ ಜವಾಬ್ದಾರಿ ಏನೂ ಕೊಟ್ಟಿಲ್ಲ; ಇದು ಕೇಂದ್ರಸರ್ಕಾರ ಪುರಷ್ಕೃತ ಯೋಜನೆಯಾಗಿರುವುದರಿಂದ ಕೇಂದ್ರಸರ್ಕಾರದಿಂದ, ತಿಂಗಳಿಗೆ 50 ರೂಪಾಯಿ ಏನು ಬರುತ್ತದೆ ಅದನ್ನು ರಾಜ್ಯಸರ್ಕಾರ ಕೊಡುತ್ತದೆ. ಅವರಿಗೆ ವಿಶೇಷವಾದ ಯಾವುದೇ ಕಾರ್ಯಕ್ರಮವನ್ನು ಕೊಟ್ಟಿಲ್ಲ, ಜವಾಬ್ದಾರಿಯನ್ನೂ ಕೊಟ್ಟಿಲ್ಲ.

ಸೇಡಂ ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಾಗಿ 60 ಲಕ್ಷ ರೂಗಳ ಮಂಜುರಾತಿ

77(975) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಾಗಿ 2000-01ನೇ ಸಾಲಿಗಾಗಿ ರೂ. 60. ಲಕ್ಷ ಮಂಜೂರಾಗಿರುವ ಗ್ರಾಮಗಳು ಯಾವುವು?

ಆ) ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕೆಲಸಗಳನ್ನು ಕೈಗೊಳ್ಳಲಾಗಿದೆ; ಆಯಾ ಗ್ರಾಮದ ಕೆಲಸಗಳ ವಿವರ ಅದಕ್ಕೆ ತಗಲುವ ಖರ್ಚಿನ ವಿವರ; ಮತ್ತು ಇವುಗಳ ನಿರ್ವಹಣೆಗಾಗಿ ಒಪ್ಪಿಸಿರುವ ಇಲಾಖೆಗಳು ಯಾವುವು?

ಇ) ಮಂಜೂರಾಗಿರುವ ಹಣದಿಂದ ಬೇಸಿಗೆ ಕಾಲದವರೆಗೆ ಕೆಲಸ ಮಾಡದೇ ಇರುವುದರಿಂದ ಗ್ರಾಮಾಂತರ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲವೆ? ಹಣ ಮಂಜೂರಿಯಾಗಿದ್ದರೂ ಪ್ರಯೋಜನೆ ಇಲ್ಲದಂತಾಗುವುದಿಲ್ಲವೆ?

ಈ) ರೂ. 60 ಲಕ್ಷ ಯೋಜನೆಯಲ್ಲಿ ಕೂಡಲೇ ಕೆಲಸಗಳನ್ನು ಪೂರ್ತಿ ಮಾಡದಿದ್ದರೆ ಬೇಸಿಗೆಯಲ್ಲಿ ತಾತ್ಪರ್ತಿಕ ನೀರು ಸರಬರಾಜು ವ್ಯವಸ್ಥೆ ಮಾಡಬಹುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿಪಂಚಾಯತ್ ರಾಜ್ ಸಚಿವರು):-

ಅ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ರೂ. 60 ಲಕ್ಷಗಳ ಹೆಚ್ಚುವರಿ ಅನುದಾನದ ಪೈಕಿ ಶೇಕಡ 50 ರಷ್ಟು ಅನುದಾನ ಅಂದರೆ ರೂ30. ಲಕ್ಷಗಳು ಬಿಡುಗಡೆಯಾಗಿದ್ದು 5 ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನುಳಿದ ಕಾಮಗಾರಿಗಳನ್ನು 2001-02 ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿವೆ.

ಈ) ಹೆಚ್ಚುವರಿ ಅನುದಾನದಡಿ ಯೋಜನೆಗಳು ಅನುಮೋದನೆಯಾಗಿರುವ ಎಲ್ಲ ಗ್ರಾಮ ಜನವಸತಿಗಳಲ್ಲಿ ಹಾಲಿ ಕುಡಿಯುವ ನೀರಿನ ಯೋಜನೆಗಳಿದ್ದು, ನೀರು ಪೂರೈಕೆ ಪ್ರಮಾಣವನ್ನು ಹೆಚ್ಚಿಸಲು ಈ ಯೋಜನೆಗಳನ್ನು ಅನುಮೋದಿಸಲಾಗಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದಲ್ಲಿ, ಅಂತಹ ಗ್ರಾಮಗಳಲ್ಲಿ ಸಮಸ್ಯೆ ಪರಿಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ- 1

ರೂ. 60 ಲಕ್ಷಗಳ ಹೆಚ್ಚುವರಿ ಅನುದಾನದಡಿ ಸೇಡಂ ತಾಲ್ಲೂಕಿನಲ್ಲಿ ಮಂಜೂರಾಗಿರುವ ಗ್ರಾಮೀಣ ನೀರು ಸರಬರಾಜು ಯೋಜನೆಗಳ ವಿವರ:

ಕ್ರ.ಸಂ.	ಗ್ರಾಮ	ಯೋಜನೆ	ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ)	ಕಾಮಗಾರಿಗಳಹಂತ	ಯೋಜನೆ ನಿರ್ಮಾಣ ಕೆಲಸವನ್ನು ವಹಿಸಲಾಗಿರುವ ಇಲಾಖೆ: ಸಂಸ್ಥೆ
1	2	3	4	5	6
1.	ಸಿಂದನಮಡು	ಕೊಳವೆ ನೀರು ಸರಬರಾಜು	6.75	-----	ಕರ್ನಾಟಕ ಭೂ ಸೇನಾ ನಿಗಮ ನಿಯಮಿತ
2.	ಹಾಬಾಳ (ಟಿ)	"	6.20	ಯೋಜನೆ ರೂ. 785 ಲಕ್ಷಗಳಿಗೆ ಮಂಜೂರಾಗಿದ್ದು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.	"
3.	ಮಳಖೇಡ ಸ್ಟೇಶನ್ ತಾಂಡಾ	"	6.80	ಯೋಜನೆ ರೂ 13.84 ಲಕ್ಷಗಳಿಗೆ ಮಂಜೂರಾಗಿದ್ದು, ರೈಸಿಂಗ್ ಮೈನ್ ಪ್ರಗತಿಯಲ್ಲಿದೆ.	"
4.	ಬೆನಕನಹಳ್ಳಿ	"	7.00	-	"
5.	ಸಂರಿಗಾವಿ (ಟಿ)	ಕಿರುನೀರು ಸರಬರಾಜು	4.37		"
6.	ಶಂಕ್ರಾಜಪುರ	"	3.48	-	"

1	2	3	4	5	6
7.	ಜೋಗೋಪನಪಲ್ಲಿ	"	3.62	ಯೋಜನೆ ರೂ. 3.48 ಲಕ್ಷಗಳಿಗೆ ಮಂಜೂರಾಗಿದ್ದು, ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ.	"
8.	ಮಲಕಾ ನಾಗಸಪಲ್ಲಿ	ಕಿರು ನೀರು ಸರಬರಾಜು	3.13	-	"
9.	ಮೊತಕಪಲ್ಲಿ	"	2.65	-	"
10.	ಬನ್ನೂರು ಮತ್ತು ಗೋಪನಪಲ್ಲಿ	"	3.75	-	"
11.	ಜಲ್ಲೇದಪಲ್ಲಿ	"	3.62	-	"
12.	ಬಂಡೆಪಲ್ಲಿ, ಕರಿಬಾವಿ, ಗೋಪ್ಯಾ ಮತ್ತು ವೆಂಕಟನಾಯಕ ತಾಂಡಾ	"	3.18	ಯೋಜನೆ ರೂ. 2.50 ಲಕ್ಷಗಳಿಗೆ ಮಂಜೂರಾಗಿದ್ದು, ಪೈಪ್‌ಲೈನ್ ಕೆಲಸ ಪ್ರಗತಿಯಲ್ಲಿದೆ.	"
13.	ಕದಲಾಪುರ ಲಕ್ಷ್ಮಣ ಮತ್ತು ದೇವತ್ಕಲ್	"	2.50	ಯೋಜನೆ ರೂ. 4.02 ಲಕ್ಷಗಳಿಗೆ ಮಂಜೂರಾಗಿದ್ದು, ರೈಸಿಂಗ್ ಮೈನ್ ಕೆಲಸ ಪ್ರಗತಿಯಲ್ಲಿದೆ.	"
14.	ಕಡರ್ಚಿಲಾ ಪಿಲ್ಲಗುಂಟಾ ಮತ್ತು ಬೇರ್‌ನಾಯ್ಕ ತಾಂಡಾ	"	2.95	-	"
		ಒಟ್ಟು	60.00		

ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ:- ಸನ್ಮಾನ್ಯ ಅಧ್ಯಕ್ಷರೇ, 'ಅ' ಪ್ರಶ್ನೆಗೆ ಉತ್ತರದಲ್ಲಿ, 14 ಗ್ರಾಮಗಳನ್ನು ತೋರಿಸಿ, ಅದಕ್ಕೆ ತಗಲಿರುವ ವೆಚ್ಚ 60 ಲಕ್ಷ ಎಂದು ಹೇಳಿದ್ದಾರೆ. 'ಆ' ಪ್ರಶ್ನೆಗೆ ಇದರ ನಿರ್ವಹಣೆಗಾಗಿ ಒಪ್ಪಿಸಿರುವ ಇಲಾಖೆಗಳು ಯಾವುದು ಎಂದರೆ ಅದಕ್ಕೆ ಉತ್ತರವನ್ನೇ ನೀಡಿಲ್ಲ. ಅದು ಯಾವ ಇಲಾಖೆ?

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಇದು ಸೇಡಂ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ ಇದೆ. ತಮಗೆ ಗೊತ್ತಿರುವ ಹಾಗೆ ಅಡಿಶನಲ್ ಪ್ಲಾನ್‌ನಲ್ಲಿ 60 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದೇವೆ. ಅದರಲ್ಲಿ 30 ಲಕ್ಷ ಮತ್ರ ಬಿಡುಗಡೆಯಾಗಿದೆ. 5 ಹಳ್ಳಿಗಳಲ್ಲಿ ಲ್ಯಾಂಡ್ ಆರ್ಮಿಯವರು ಕೆಲಸ

ಮಾಡುತ್ತಿದ್ದಾರೆ. ಹದಿನಾಲ್ಕು ಕೆಲಸಗಳ ಪೈಕಿ ಐದು ಕೆಲಸಗಳನ್ನು ಇದೇ ವರ್ಷ ಮುಗಿಸುತ್ತೇವೆ. ಬಾಕಿ ಇರುವ ಕೆಲಸಗಳನ್ನು ಮುಂದಿನವರ್ಷ ಮುಗಿಸುತ್ತೇವೆ. 60 ಲಕ್ಷ ಅಡಿಶನಲ್ ಗ್ರಾಂಟ್‌ನ್ನು ಸೇಡಂ ತಾಲ್ಲೂಕಿಗೆ ಕೊಟ್ಟಿದ್ದೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಜಿಲ್ಲಾ ಇಂಜಿನಿಯರಿಂಗ್ ಉಪವಿಭಾಗದವರು 14 ಗ್ರಾಮಗಳ ಕುಡಿಯುವ ನೀರಿನ ಯೋಜನೆಗೆ 60 ಲಕ್ಷ ರೂಪಾಯಿಗಳ ಅಂದಾಜನ್ನು ತೋರಿಸಿದ್ದರು. ಕೇವಲ 5 ಗ್ರಾಮಗಳಿಗೆ 30 ಲಕ್ಷ ರೂಪಾಯಿಗಳನ್ನು ಭೂ ಸೇನಾ ನಿಗಮಕ್ಕೆ ಕೊಡಲಾಗಿದೆ. ಮತ್ತು ಈ ಗ್ರಾಮಗಳಲ್ಲಿ ಕೂಡ 30 ಲಕ್ಷ ರೂಪಾಯಿಗಳ ಕೆಲಸ ಏನು ಕೊಟ್ಟಿದ್ದಾರೆ. ಈಗ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗೆ ತೊಂದರೆ ಯಾಗಿರುವ ಕಾಲದಲ್ಲಿ ಅವರು ಕೆಲಸ ಪ್ರಾರಂಭ ಮಾಡಿದ್ದಾರೆ. ಬೇಸಿಗೆ ಕಾಲದಲ್ಲಿ ಕೇವಲ ಐದು ಗ್ರಾಮಗಳಿಗೆ ಮತ್ರ ಕುಡಿಯುವ ನೀರು ಒದಗಿಸಲು ಭೂ ಸೇನಾನಿಗಮದವರು ಕೆಲಸ ಮಾಡುತ್ತಿದ್ದಾರೆ. ಭೂ ಸೇನಾನಿಗಮದವರಿಗೆ 15-20 ಪ್ರತಿಶತ ಹೆಚ್ಚು ಹಣವನ್ನು ನೀಡಿದರೂ ಸಹ ಅವರು ವೇಳೆಗೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಅವರ ಕೆಲಸ ಸಹ ಕಳಪೆದರ್ಜೆ ಯಾದ್ದಾಗಿದೆ. ಭೂ ಸೇನಾ ನಿಗಮದವರು ನಿರ್ಮಾಣ ಮಾಡಿದ ಎಷ್ಟೋ ಮನೆಗಳು ನಮ್ಮಲ್ಲಿ ಬಿದ್ದುಹೋಗಿದೆ. ಭೂ ಸೇನಾ ನಿಗಮದವರು ನಿರ್ಮಾಣ ಮಾಡಿದ ಎಷ್ಟೋ ಮನೆಗಳು ನಮ್ಮಲ್ಲಿ ಬಿದ್ದುಹೋಗಿವೆ. ಈ ರೀತಿ ವೇಳೆಗೆ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಕುಡಿಯುವ ನೀರಿಗೆ ಬಹಳ ತೊಂದರೆ ಯುಂಟಾಗಿದೆ, ಇದನ್ನು ಅವರು ಯಾವಾಗ ಮಾಡುತ್ತಾರೆ ಮತ್ತು ಮುಂದಿನ 9 ಗ್ರಾಮಗಳ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ?

ಶ್ರೀ ಎಂ.ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಈ ಐದು ಕೆಲಸಗಳಿಗೆ 30 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದು ನಿಜ. ಈ ಕೆಲಸಗಳಲ್ಲಿ ನಾಲ್ಕೂ ಪೈಪ್ ವಾಟರ್ ಸಪ್ಲೈ ಸ್ಕೀಮ್ಸ್ ಇರುವುದರಿಂದ, ಅದಕ್ಕೆ ಸ್ವಲ್ಪ ಜಾಸ್ತಿ ಹಣ ಖರ್ಚಾಗುತ್ತದೆ. 14 ಕೆಲಸಗಳಲ್ಲಿ ಬೇರೆ ಕೆಲಸಗಳೆಲ್ಲಾ ಮಿನಿ ವಾಟರ್ ಸಪ್ಲೈ ಸ್ಕೀಮ್ಸ್ ಇರುವುದರಿಂದ ಕಡಿಮೆ ಹಣ ಖರ್ಚಾಗಿದೆ. ಈ ನಾಲ್ಕು ಕೆಲಸಗಳನ್ನೂ ಇದೇ ಜೂನ್ ತಿಂಗಳೊಳಗಾಗಿ ಮುಗಿಸುತ್ತೇವೆ. ಇಲ್ಲಿ ನೀರಿಲ್ಲ ಎಂದಲ್ಲ, ಆಗಲೇ ನೀರಿನ ವ್ಯವಸ್ಥೆ ಇದೆ. ಇದನ್ನು ಅಡಿಷನಲ್ ಕಾರ್ಯಕ್ರಮದಲ್ಲಿ ನಾವು ಸೇರಿಸಿದ್ದೇವೆ. ಈ 14 ಹಳ್ಳಿಗಳನ್ನು ಮೊದಲು ಪೂರ್ಣಗೊಳಿಸಿ ಪ್ರತಿಯೊಂದು ಹಳ್ಳಿಯಲ್ಲೂ ನೀರಿನ ವ್ಯವಸ್ಥೆ ಆಗಲೇ ಆಗಿದೆ. ಇಲ್ಲಿ ಎಷ್ಟೆಷ್ಟು ಎಲ್.ಪಿ.ಸಿ.ಡಿ.ಪ್ರತಿಯೊಂದು ಹಳ್ಳಿಗೆ ಸಿಗುತ್ತಾ ಇದೆ ಎನ್ನುವ ಬಗ್ಗೆ ಪಟ್ಟಿ ಇದೆ. ಅದು ಸಾಲದು ಎಂದು ಹೇಳಿ, ನೂರು ಕೋಟಿ ರೂಪಾಯಿಗಳ ಅಡಿಷನಲ್ ಕಾರ್ಯಕ್ರಮ ಹಾಕಿ, ನಾವು ಏನು ಬಿಡುಗಡೆ ಮಾಡಿದ್ದೆವು, ಅದರಲ್ಲಿ ಸೇಡಂ ತಾಲ್ಲೂಕಿಗೆ ಈ 14 ಕಾರ್ಯಕ್ರಮಗಳಿಗೆ ನಾವ 60 ಲಕ್ಷ ಬಿಡುಗಡೆ ಮಾಡಿದ್ದೇವೆ. ಅಂದರೆ, 30 ಲಕ್ಷ ಬಿಡುಗಡೆ ಮಾಡಿದ್ದೇವೆ, ಇನ್ನು 30 ಲಕ್ಷ ಸ್ಯಾಂಕ್ಷನ್ ಮಾಡಿಸಿ, ಅದನ್ನೂ ಕೂಡ ಬಿಡುಗಡೆ ಮಾಡುತ್ತೇವೆ. ಇದು ಮುಂದಿನ ವರ್ಷ ಆಗುತ್ತದೆ. ಇಷ್ಟು ಮಾಡಿದರೂ ಕೂಡ ಈ ಬೇಸಿಗೆಯಲ್ಲಿ ಏನಾದರೂ ತೊಂದರೆಯುಂಟಾದರೆ, ಅದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:- ಇಲ್ಲ ಉತ್ತರದಲ್ಲಿ ನೀರಿನ ಪ್ರಮಾಣ ಹೆಚ್ಚಿಸಲು ಈ ಯೋಜನೆಗಳನ್ನು ಅನುಮೋಡಿಸಲಾಗಿದೆ ಎಂದು ತೋರಿಸಿದ್ದಾರೆ. ನಿಜ, ಆದರೆ, ಈ ಬೇಸಿಗೆ

ಕಾಲದಲ್ಲಿ, ಅಲ್ಲಿ ನೀರಿನ ತೊಂದರೆಯಾಗುವುದಕ್ಕೆ, ನೀರಿನ ಪ್ರಮಾಣವನ್ನು ಹೆಚ್ಚು ಮಾಡಬೇಕಾಗಿದೆ. ಈ ಬೇಸಿಗೆ ಕಾಲಕ್ಕೆ ಈ ಯೋಜನೆ ಪೂರ್ತಿಯಾಗಬೇಕಾಗಿತ್ತು. ಆವರು ಮತ್ತೆ ಮಳೆಗಾಲ ಪ್ರಾರಂಭವಾದಾಗ ಜೂನ್, ಜುಲೈ, ಆಗಸ್ಟ್, ತಿಂಗಳವರೆಗೆ ಕೆಲಸ ಮಾಡುತ್ತಾ ಹೋದರೆ ಅಲ್ಲಿ ನೀರಿನ ತೊಂದರೆ ಯಾಗುತ್ತದೆ. ಅದರ ಸಲುವಾಗಿ, ತುರ್ತಾಗಿ ಮಾಡುವುದಕ್ಕೆ ಅವರಿಗೆ ಆದೇಶ ನೀಡಬೇಕು. ಇನ್ನು ನನ್ನ ಕ್ಷೇತ್ರದಲ್ಲಿ, ಚಿತ್ತಾಪುರ ತಾಲ್ಲೂಕಿನಲ್ಲಿ 5 ಗ್ರಾಮಗಳು ಬರುತ್ತವೆ. ಆಲ್ಲೂರ್ ಬಿ. ಆಲ್ಲೂರ್ ಕೆ ಮತ್ತು ಬೇರೆ ತಾಂಡಾಗಳು ಇವೆ. ಅಲ್ಲಿಯೂ ಸಹಿತ ಈಭೂಸೇನಾ ನಿಗಮದವರು ಕೆಲಸವನ್ನೇ ಪ್ರಾರಂಭ ಮಾಡಿಲ್ಲ. ಅದಕ್ಕಾಗಿ ಈ ಕೆಲಸಗಳನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ಆದೇಶ ನೀಡಬೇಕೆಂದು ಮಾನ್ಯಸಚಿವರಲ್ಲಿ ವಿನಂತಿಸುತ್ತೇನೆ. ಇನ್ನು ಸುಮಾರು 50 ಗ್ರಾಮಗಳಲ್ಲಿ ಈಗಾಗಲೇ ಕುಡಿಯುವ ನೀರಿನ ತೊಂದರೆ ಉಂಟಾಗಿದೆ. ಈ ವರ್ಷ ಮಳೆಗಾಲ ಹೆಚ್ಚಾದರೂ ಸಹ, ಈಗಾಗಲೇ ನದಿ, ನಾಲೆಗಳೆಲ್ಲಾ ಬತ್ತಿ ಹೋಗಿರುತ್ತವೆ. ಅದಕ್ಕಾಗಿ ನೀರಿನ ತೊಂದರೆಯುಂಟಾಗಿರುವ ಈ ಭಾಗಗಳಲ್ಲೂ ಕೂಡಲೇ ವ್ಯವಸ್ಥೆ ಮಾಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಎಂ.ವೈ ಘೋರ್ಪಡೆ:- ಮಾನ್ಯ ಅಧ್ಯಕ್ಷರೇ, ಆದಷ್ಟುಮಟ್ಟಿಗೆ, ಬೇಗ ಈ ಕೆಲಸಗಳನ್ನು ಮುಗಿಸಲಿಕ್ಕೆ ನಾವು ಒತ್ತಾಯ ಮಾಡುತ್ತೇವೆ ಲ್ಯಾಂಡ್ ಆರ್ಮಿಯವರಿಗೆ ಹೇಳುತ್ತೇವೆ. ಆದಲ್ಲದೆ, ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಇದ್ದಾರೆ. ಅವರಿಗೂ ನಾವು ತಿಳಿಸುತ್ತೇವೆ. ಈಗಾಗಲೇ ನೀರಿನ ತೊಂದರೆಯುಂಟಾಗಿರುವ ಒಂದೆರೆಡು ಕಡೆಗಳಲ್ಲಿ, ತಕ್ಷಣ ಪೂರ್ವಬಾವಿಯಾಗಿ ಕ್ರಮ ಕೈಗೊಳ್ಳಬೇಕೆಂದು ಆದೇಶ ಮಾಡುತ್ತೇವೆ.

ತುರುವೇಕೆರೆ ತಾಲ್ಲೂಕು ದುಂಡಾ ಗ್ರಾಮದಲ್ಲಿ ಎ.ಎನ್.ಎಂ. ಕೇಂದ್ರ ತೆರೆಯುವುದು.

78 (812) ಶ್ರೀ ಲಕ್ಷ್ಮೀನಾರಾಯಣ ಎಂ. ಡಿ. (ಅಣ್ಣಯ್ಯ) (ತುರುವೇಕೆರೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ದುಂಡಾಗ್ರಾಮ ಬಹಳ ದೊಡ್ಡ ಗ್ರಾಮವಿದ್ದು, ಇಲ್ಲಿನ ಸುತ್ತಮುತ್ತ ಗ್ರಾಮಗಳಿಗೆ (ಕೋಡಿಹಳ್ಳಿ, ಕಬ್ಬೇಪಾಳ್ಯ, ಹೊಸೂರು, ಚಿಕ್ಕಸಂದ್ರ, ಹೆಗ್ಗೆರೆ, ಡಿ.ಹೊಸಹಳ್ಳಿ, ಅರಕೆರೆ) ಗ್ರಾಮಗಳಿಗೆ ಅನುಕೂಲವಾಗಲು ಒಂದು ಎ.ಎನ್.ಎಂ.ಸೆಂಟರ್. ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ?

ಆ) ಇದ್ದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಈ ವರ್ಷದ ಆಯವ್ಯಯದಲ್ಲಿಯಾದರೂ ಎ.ಎನ್. ಎಂ.ಸೆಂಟರ್ ತೆರೆಯುವುದನ್ನು ಸೇರಿಸಲಾಗುವುದೇ?

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.